ಈ ವರ್ಷದ ವೈದ್ಯಕೀಯ ಶಿಕ್ಷಣ ಆಯವ್ಯಯದಲ್ಲಿ ಸುಮಾರು 30 ಕೋಟಿ ರೂಪಾಯಿಗಳ ಹೆಚ್ಚುವರಿ ಹಣ ಒದಗಿಸಲಾಗಿದ್ದು, ಈ ಆಸ್ಪತ್ರೆಗೆ ಪ್ರತ್ಯೇಕ ಹೊರರೋಗಿಗಳ ವಿಭಾಗ ಕಟ್ಟುವುದು ಮತ್ತು ಹಾಸಿಗೆಗಳ ಸಂಖ್ಯೆ ಹೆಚ್ಚು ಮಾಡಲು ಅವಶ್ಯಕ ಕಟ್ಟಡದ ಪ್ಲಾನ್ ಮತ್ತು ಅಂದಾಜು ಪಟ್ಟಿ ತಯಾರಿಸಲು ಇಲಾಖೆಯ ನಿರ್ದೇಶಕರಿಗೆ ತಿಳಿಸಲಾಗುವುದು. ಈ ಬಗ್ಗೆ ಎರಡು ಮೂರು ತಿಂಗಳುಗಳಲ್ಲಿ ಸ್ಪಷ್ಟ ಚಿತ್ರ ತಿಳಿದು ಬರುವುದು.

2) ಆರ್. ಟಿ. ನಗರದ ಸೇಂಟ್‌ಪಾಲ್ ಶಾಲೆಗೆ ಮನ್ನಣೆ .

ಶ್ರೀ ಟಿ. ಬಿ. ಜಯಚಂದ್ರ (ಕಳ್ಳಂಬೆಳ್ಳ) : ಮಾನ್ಯ ಅಧ್ಯಕ್ಷರೇ, ಬೆಂಗಳೂರು ಉತ್ತರ ತಾಲ್ಲೂಕಿನ ಆರ್. ಟಿ. ನಗರ ಬಡಾವಣೆಯಲ್ಲಿ ನವೋದಯ ವಿದ್ಯಾ ಸಂಸ್ಥೆಯ ಶಾಲೆಯು 87 ರಲ್ಲಿ ಸೆಂಟ್‌ಪಾಲ್ಸ್ ಇಂಗ್ಲೀಷ್ ಮಿಡಿಯಂ ಶಾಲೆಯಲ್ಲಿ ನಡೆಯುತ್ತಿರುವ ದುರ್ವ್ಯವಹಾರದ ವಿರುದ್ಧ ಪೋಷಕರು ಬಂಡೆದ್ದು ಪೋಷಕರೇ ಶಾಲೆಯನ್ನು ನಡೆಸಿಕೊಂಡು ಬರುತ್ತಿದ್ದು ಸರ್ಕಾರಕ್ಕೆ ತಿಳಿದ ವಿಷಯವಾಗಿರುತ್ತದೆ. ಈ ಶಾಲೆಯು ಪೋಷಕರ ಮಾರ್ಗದರ್ಶನದಲ್ಲಿ ಸಮರ್ಪಕ ಹಾಗೂ ನಿಯಮಾವಳಿಗಳ ಅನುಸಾರವಾಗಿ ನಡೆಯುತಲಿದ್ದು ಮತ್ತು ಈ ಶಾಲೆಯಲ್ಲಿ 600ಕ್ಕೂ ಹೆಚ್ಚು ಮಕ್ಕಳು ಎಲ್.ಕೆ.ಜಿ.ಯಿಂದ 10ನೇ ತರಗತಿಯವರೆಗೂ ಶಾಲೆಗಳು ನಡೆಯುತ್ತಲಿದ್ದು ಈ ಶಾಲೆಗೆ ಮಾನ್ಯತೆ ದೊರಕಿಸಿಕೊಡಲು ಶ್ರೀ ವೀರಪ್ಪಮೊಯಿಲಿಯವರು, ಮಾನ್ಯ ಮುಖ್ಯ ಮಂತ್ರಿಗಳು , ಹಾಗೂ ಶ್ರೀ ಎಸ್. ಎಂ. ಯಾಹ್ಯಾರವರು ಇಂದಿನ ಶಿಕ್ಷಣ ಸಚಿವರು ಶಾಲೆಗೆ ಭೇಟಿ ಕೊಟ್ಟಿದ್ದು ಇದುವರೆಗೂ ಮಾನ್ಯತೆ ನೀಡಿರುವುದಿಲ್ಲ.

ಸರ್ವೋಚ್ಚ ನ್ಯಾಯಾಲಯದ ತೀರ್ಪು ಬಂದಿದ್ದು ಕೂಡಲೇ ಮಂತ್ರಿಗಳು ಎಲ್.ಕೆ.ಜಿ.ಯಿಂದ 7ನೇ ತರಗತಿಯವರೆಗೆ ಐಸಿಎಸ್‌ಸಿ ಮಾದರಿಗೆ ನೋ ಅಬ್ಜೆಕ್ಷನ್ ಸರ್ಟಿಫಿಕೇಟ್ ಕೂಡಲೇ ಕೊಡಿಸುವಿರಾ? ಮತ್ತು ಹೈಸ್ಕೂಲ್ ಶಾಲೆಗೆ ಮಾನ್ಯತೆಯನ್ನು ಕೊಡುವಿರಾ? ಎಂದು ಕೇಳುತ್ತೇನೆ.

ಡಾ॥ ಹೆಚ್. ಡಿ. ಲಮಾಣಿ (ಪ್ರಾಥಮಿಕ ಹಾಗೂ ಪ್ರೌಢ ಶಿಕ್ಷಣ ಸಚಿವರು) : ಮಾನ್ಯ ಅಧ್ಯಕ್ಷರೇ, ನವೋದಯ ವಿದ್ಯಾನಿಕೇತನ ಶಾಲೆ ದಿನ್ನೂರು ಮುಖ್ಯ ರಸ್ತೆ ಆರ್. ಟಿ. ನಗರ, ಬೆಂಗಳೂರು ಈ ಸಂಸ್ಥೆಯು ಕೇಂದ್ರ ಮಾದರಿ ಪಠ್ಯ ಕ್ರಮ ಪದ್ಧತಿ ಅಳವಡಿಸಿಕೊಳ್ಳುವ ಬಗ್ಗೆ ರಾಜ್ಯ ಉಚ್ಚನ್ಯಾಯಾಲಯದಲ್ಲಿ ದಾವೆ ಹೂಡಿದ್ದು ನ್ಯಾಯಾಲಯವು ದಿನಾಂಕ 20-4-90ರಲ್ಲಿ ನಿಯಮಾನುಸಾರವಾಗಿ ಅರ್ಹತೆ ಮೇಲೆ ಪರಿಶೀಲಿಸುವಂತೆ ಆದೇಶಿಸಿದೆ. ಈ ಶಾಲೆಯು 1 ರಿಂದ 10ನೇ ತರಗತಿಯವರೆಗೆ ಕೇಂದ್ರ ಮಾದರಿ ಪಠ್ಯ ಕ್ರಮ ಪದ್ಧತಿಯಲ್ಲಿ ಅನಧಿಕೃತವಾಗಿ ಶಾಲೆ ನಡೆಸುತ್ತಿದ್ದು ಕೇಂದ್ರ ಮಾದರಿ ಪಠ್ಯ ಕ್ರಮವು ಅಳವಡಿಕೆಗಾಗಿ ಕೋರಿಕೆ ಸಲ್ಲಿಸಿರುತ್ತಾರೆ. ಆದರೆ ನಿಗದಿತ ನಮೂನೆಯಲ್ಲಿ ಪ್ರಸ್ತಾವನೆ ಸಲ್ಲಿಸಿರುವುದಿಲ್ಲವೆಂದು ವರದಿಯಾಗಿದೆ. ನಿಯಮದಂತೆ ಅಧಿಕೃತ ಆಂಗ್ಲ ಮಾಧ್ಯಮ ಶಾಲೆಗಳು ರಾಜ್ಯ ಸರ್ಕಾರದ ಮಾನ್ಯತೆ ಪಡೆದು 7ನೇ ತರಗತಿಯವರೆಗೆ ನಡೆಸುತ್ತಿದ್ದಲ್ಲಿ ಮಾತ್ರ ರಾಜ್ಯ ಸರ್ಕಾರದಿಂದ ಕೇಂದ್ರ ಮಾದರಿ ಪಠ್ಯ ಕ್ರಮ ನಡೆಸಲು ಆಕ್ಷೇಪಣೆ ಇಲ್ಲ ಪತ್ರ ಕೋರಲು ಅರ್ಹತೆ ಪಡೆಯುವುದು.

3.15 ಪಿ. ಎಂ.

3.15 ಪಿ. ಎಂ

3) ಹುಬ್ಬಳ್ಳಿ - ಧಾರವಾಡಕ್ಕೆ ಪ್ರತ್ಯೇಕ ಅಗ್ನಿಶಾಮಕ ವ್ಯವಸ್ಥೆ.

ಶ್ರೀ ಎ. ಎಂ. ಹಿಂಡಸಗೇರಿ (ಹುಬ್ಬಳ್ಳಿ) : ಮಾನ್ಯ ಅಧ್ಯಕ್ಷರೇ, ಹುಬ್ಬಳ್ಳಿ- ಧಾರವಾಡ ಮಹಾನಗರ ಸಭೆಯ ವ್ಯಾಪ್ತಿಯಲ್ಲಿರುವ ಅಗ್ನಿಶಾಮಕ ದಳವನ್ನು 1990 ನೇ ಸಾಲಿನಲ್ಲಿ ಸರ್ಕಾರದವರು ವಹಿಸಿಕೊಂಡು ನಂತರ ಹುಬ್ಬಳ್ಳಿಯಲ್ಲಿರುವ ಅಗ್ನಿಶಾಮಕ ದಳವನ್ನು ಅಮರಗೋಳ ಎಪಿಎಂಸಿ ಮಾರುಕಟ್ಟೆಗೆ ಸ್ಥಳಾಂತರಿಸಿರುತ್ತಾರೆ. ಕಾರಣ ಇದರಿಂದ ಹುಬ್ಬಳ್ಳಿಯಲ್ಲಿ ಅಥವಾ ಧಾರವಾಡದಲ್ಲಿ ಅಗ್ನಿಗೆ ಆಹುತಿಯಾದದ್ದನ್ನು ತುರ್ತಾಗಿ ನಿಯಂತ್ರಿಸಲು ಅಸಾಧ್ಯ ಉಂಟಾಗಿರುವುದು ಕಂಡು ಬರುತ್ತದೆ. ಏಕೆಂದರೆ, ಹುಬ್ಬಳ್ಳಿಯಿಂದ 12 ಕಿ. ಮೀ. ಆಗುತ್ತದೆ. ಧಾರವಾಡದಿಂದಲೂ ಸಹ 12 ಕಿ.ಮೀ. ಅಂತರವಿರುತ್ತದೆ. ಈ ಎರಡೂ ಶಹರಗಳ ಮಧ್ಯದಲ್ಲಿ ಅಗ್ನಿಶಾಮಕ ದಳವನ್ನು ಸ್ಥಳಾಂತರಿಸುವುದರಿಂದ, ತೊಂದರೆಯನ್ನು ಅನುಭವಿಸುವಂತಹ ಪರಿಸ್ಥಿತಿಯುಂಟಾಗಿರುವುದು ಸರಕಾರದ ಗಮನಕ್ಕೆ ಬಂದಿದೆಯೇ?

ಆದಕ್ಕೋಸ್ಕರ ನಾನು ಈ ಮೂಲಕ ತಮಲ್ಲಿ ವಿನಂತಿಸಿಕೊಳ್ಳುವುದೇನೆಂದರೆ, ಹುಬ್ಬಳ್ಳಿ ಶಹರದಲ್ಲಿ ಒಂದು, ಧಾರವಾಡ ಶಹರದಲ್ಲಿ ಒಂದು ಅಗ್ನಿಶಾಮಕ ದಳದ ವಾಹನಗಳನ್ನು ನಿಲ್ಲಿಸುವ ವ್ಯವಸ್ಥೆ ಅತೀ ತುರ್ತಾಗಿ ಕೈಗೊಳ್ಳಬೇಕೆಂದು ಒತ್ತಾಯಿಸುತ್ತೇನೆ.

ಶ್ರೀ ಬ್ಲೇಸಿಯಸ್ ಎಂ. ಡಿಸೋಜ (ಕಾರ್ಮಿಕ ಸಚಿವರು) : (ಗೃಹಸಚಿವರ ಪರವಾಗಿ) 1986ನೇ ಇಸವಿಯಿಂದ ಹುಬ್ಬಳ್ಳಿ ಮತ್ತು ಧಾರವಾಡ ನಗರಗಳ ನಡುವೆ ಇರುವ ಅಮರಗೋಳ ಎಂಬ ಜಾಗದಲ್ಲಿ ಸುಸಜ್ಜಿತವಾದ ಅಗ್ನಿಶಾಮಕ ಠಾಣೆಯೊಂದನ್ನು ನಡೆಸಲಾಗುತ್ತಿದೆ. ಈ ಸ್ಥಳವು ಹುಬ್ಬಳ್ಳಿಯಿಂದ ಹಾಗೂ ಧಾರವಾಡದಿಂದ 12 ಕಿ.ಮೀ.ಗಳ ಅಂತರದಲ್ಲಿದ್ದು ಎರಡೂ ಕಡೆಯ ಸಮಸ್ಯೆಗಳನ್ನು ನಿಭಾಯಿಸಲು ಅನುಕೂಲವಾಗಿದೆ. ಸಾಧಾರಣವಾಗಿ ಒಂದು ಅಗ್ನಿಶಾಮಕ ಠಾಣೆಯು 40 ಕಿ.ಮಿ.ಗಳ ಅಂತರದವರೆಗೂ ಇರುವ ಸಮಸ್ಯೆಗಳನ್ನು ನಿಭಾಯಿಸುವ ವ್ಯವಸ್ಥೆ ಇದೆ. ಪ್ರಸ್ತುತ ಹುಬ್ಬಳ್ಳಿ ಮತ್ತು ಧಾರವಾಡ ಎರಡೂ 12 ಕಿ.ಮಿ.ಗಳ ಅಂತರದೊಳಗೆ ಇರುವುದರಿಂದ ಯಾವುದೂ ತೊಂದರೆ ಇರುವುದಿಲ್ಲ. ಅಂತಹ ಯಾವುದೇ ತೊಂದರೆಯು ಸರ್ಕಾರದ ಗಮನಕ್ಕೆ ಬಂದಿರುವುದಿಲ್ಲ. ಆದಾಗ್ಯೂ ಹುಬ್ಬಳ್ಳಿಯಲ್ಲಿ ಮುಂಬರುವ ವರ್ಷಗಳಲ್ಲಿ ಪ್ರತ್ಯೇಕವಾದ ಒಂದು ಅಗ್ನಿಶಾಮಕ ಠಾಣೆಯನ್ನು ಸ್ಥಾಪಿಸುವುದರ ಬಗ್ಗೆ ಹಣಕಾಸು ಹಾಗೂ ಇತರೆ ಸಂಪನ್ಮೂಲಗಳನ್ನು ಆಧರಿಸಿ ಪರಿಶೀಲಿಸಲಾಗುತ್ತಿದೆ.

ಈಗಲೂ ಕೂಡ ಮುಂಜಾಗ್ರತೆಯ ಕ್ರಮವಾಗಿ ಕಾನೂನು ಮತ್ತು ಸುವ್ಯವಸ್ಥೆಗೆ ಧಕ್ಕೆಗಳು ಒದಗುವ ಸಂದರ್ಭಗಳಲ್ಲಿ ಹುಬ್ಬಳ್ಳಿಯಲ್ಲಿ ಒಂದು ಅಗ್ನಿಶಾಮಕ ವಾಹನವನ್ನು, ಧಾರವಾಡದಲ್ಲಿ ಒಂದು ಅಗ್ನಿಶಾಮಕ ವಾಹನವನ್ನು ನಿಲ್ಲಿಸುವ ವ್ಯವಸ್ಥೆಯನ್ನು ಮಾಡಲಾಗುತ್ತಿದೆ.

4) ಮಲೆನಾಡು ಅಭಿವೃದ್ಧಿ ಯೋಜನೆಯಡಿಯಲ್ಲಿ ಒದಗಿಸಿದ ಹಣ ಬಿಡುಗಡೆಯಾಗದಿರುವುದು.

ಶ್ರೀ ಶಿವಾನಂದ ಹೆಚ್. ಕೌಜಲಗಿ (ಬೈಲಹೊಂಗಲ) : ಮಾನ್ಯ ಅಧ್ಯಕ್ಷರೇ, ಮಲೆನಾಡು ಅಭಿವೃದ್ಧಿ ಯೋಜನೆಯಲ್ಲಿ 1991-92 ಹಾಗೂ 1992-93ನೇ ಸಾಲಿನಲ್ಲಿ ಹತ್ತು ಕೋಟಿ ರೂಪಾಯಿಗಳನ್ನು ಹಾಗೂ ಮೂವತ್ತೈದು ಕೋಟಿ ರೂಪಾಯಿಗಳನ್ನು ಅನುಕ್ರಮವಾಗಿ ಆಯವ್ಯಯ ಪಟ್ಟಿಯಲ್ಲಿ ನೀಡಲಾಗಿತ್ತು. ಆದರೆ ಈ ಹಣವು ಇನ್ನೂವರೆಗೂ ಖರ್ಚಾಗಿರುವುದಿಲ್ಲವೆಂದು ದುರ್ದೈವದಿಂದ ಹೇಳಬೇಕಾಗಿದೆ. ಅಲ್ಲದೇ ಈ ಹಣವು